ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 506/2021
ಪಿ.ಡಬ್ಲ್ಯೂ ಃ 1

ದಿನಾಂಕಃ 27-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಯು ಎಸ್ ಎಸ್ ವಕೀಲರಿಂದ

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದಂತಹ ದಾಖಲೆಗಳನ್ನು ನೋಡಿ ಸರಿಯಾಗಿ ಎಂದು ಪರಿಶೀಲಿಸಿ ಹಾಜರುಪಡಿಸಿರುತ್ತೇನೆ. ನನ್ನ ಹೆಸರಿನಲ್ಲಿ ತೆಕ್ಕಟ್ಟೆ ಗಹ್ರಾಮದಲ್ಲಿ ಯಾವುದೇ ಆಸ್ತಿ ಇರುವುದಿಲ್ಲ, ನನ್ನ ಹೆಂಡತಿಯ ಹೆಸರಿನಲ್ಲಿ ಆಸ್ತಿ ಇರುತ್ತದೆ. ದಾವಾ ಸ್ವತ್ತನ್ನು ನನ್ನ ಹೆಂಡತಿ ಕ್ರಯ ಮಾಡಿರುತ್ತಾಳೆ ಎಂದರೆ ಸರಿ. ನನ್ನ ಹೆಂಡತಿ ಶೀನ ದೇವಾಡಿಗ ಎಂಬುವವರಿಂದ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾಳೆ ಎಂದರೆ ಸರಿ. ಶೀನ ದೇವಾಡಿಗರವರಿಗೆ ಅವರ ಕುಟುಂಬದಲ್ಲಿ ಆದ ವಿಭಾಗದಂತೆ ಶೀನ ದೇವಾಡಿಗರವರಿಗೆ ದಾವಾ ಸ್ವತ್ತು ಬಂದಿತ್ತು ಎಂದರೆ ಸರಿ.

2. ನಾನು ಖರೀದಿ ಮಾಡುವ ಪೂರ್ವದಲ್ಲಿ ಸದರಿ ದಾಖಲೆಗಳನ್ನು ಓದಿ ನೋಡಿ ಸರಿ ಇದೆ ಎಂದು ತಿಳಿದುಕೊಂಡು ಖರೀದಿ ಮಾಡಿರುತ್ತೇನೆ. ಸದರಿ ವಿಭಾಗ ಪತ್ರದಲ್ಲಿ ಶೀನ ದೇವಾಡಿಗರವರಿಗೆ ಸರ್ವೆ ನಂಬ್ರ 68/8 ರಲ್ಲಿ 15 1/2 ಸೆಂಟ್ಸ್ ಜಾಗ ಹಾಗೂ 68/12 ರಲ್ಲಿ 17 1/2 ಸೆಂಟ್ಸ್ ಜಾಗ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ಕ್ರಯ ಪತ್ರದಲ್ಲಿ ನಮೂದಿಸಿದಂತೆ ಸರ್ವೆ ನಂಬ್ರ 68/8 ರಲ್ಲಿ ನನ್ನ ಹೆಂಡತಿಗೆ ಆರ್ ಟಿ ಸಿ ಯಲ್ಲಿ ಹೆಸರು ನಮೂದಾಗಿರುತ್ತದೆ ಎಂದರೆ ಸರಿ.

3. ನಾನು ಖರೀದಿ ಮಾಡಿದ ಜಾಗದಲ್ಲಿ ಮನೆ ಕಟ್ಟಿಸಿರುತ್ತೇನೆ. ಈಗ್ಗೆ 22 ವರ್ಷಗಳ ಹಿಂದೆ ಮನೆ ಕಟ್ಟಿಸಿರುತ್ತೇನೆ. ಮನೆ ಕಟ್ಟಿಸಿದ ಸ್ಥಳವನ್ನು ನಾನು ಭೂ ಪರಿವರ್ತಿಸಿರುತ್ತೇನೆ ಎಂದರೆ ಸರಿ. ಭೂ ಪರಿವರ್ತಿಸುವ ಮೊದಲು ಅದಕ್ಕೆ ಬೇಕಾದ ನಕ್ಷೆಯನ್ನು ತಯಾರಿಸಿರುತ್ತೇನೆ ಎಂದರೆ ಸರಿ. ಮನೆ ಕಟ್ಟಲು ತೆಕ್ಕಟ್ಟೆ ಗ್ರಾಮ ಪಂಚಾಯತಿಯಿಂದ ಪರವಾನಿಗೆಯನ್ನು ಸಹ ಪಡೆದುಕೊಂಡಿರುತ್ತೇನೆ, ಅದೇ ರೀತಿ ಸದರಿ ಮನೆಗೆ ತೆಕ್ಕಟ್ಟೆ ಗ್ರಾಮ ಪಂಚಾಯತಿ ಡೋರ್ ನಂಬ್ರ ಸಹ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಮನೆ ಈಗ ನನ್ನ ಹೆಂಡತಿ ಬೇಬಿ ಪೂಜಾರ್ತಿ ಹೆಸರಿನಲ್ಲಿ ಇರುತ್ತದೆ. ಆ ಮನೆಗೆ ವಿದ್ಯುತ್ ಸಂಪರ್ಕವೂ ಇರುತ್ತದೆ ಎಂದರೆ ಸರಿ.

4. ನಿಪಿ.3 ಕರಾರು ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸದರಿ ನಿಪಿ.3 ರ ದಾಖಲೆಯನ್ನು ದಿನಾಂಕ 01-04-2008 ರಂದು ಮಾಡಿಕೊಂಡಂತೆ ಕಂಡು ಬರುತ್ತದೆ ಎಂದರೆ

ಸರಿ. ಸದರಿ ನಿಪಿ.3 ಕ್ಕೆ ರೂ.20/- ನ ಸ್ಟಾಂಪನ್ನು ಕಟ್ಟಿರಲಾಗಿರುತ್ತದೆ ಎಂದರೆ ಸಾಕ್ಷಿ ಅವರು ತಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ಟಾಂಪ್ ಪೇಪರನ್ನು ಕ್ರಯ ಕೊಟ್ಟವರೇ ಖರೀದಿ ಮಾಡಿರುತ್ತಾರೆ. ಸ್ಟಾಂಪ್ ಪೇಪರನ್ನು ರಾಮ ದೇವಾಡಿಗರವರು ಖರೀದಿ ಮಾಡಿದ್ದಾರೆ ಎಂಬುದನ್ನು ಸದರಿ ದಾಖಲೆಯಲ್ಲಿ ಎಲ್ಲಿಯೂ ಬರೆದಿರುವುದಿಲ್ಲ ಎಂದರೆ ಸಾಕ್ಷಿ ಅವರೇ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

5. ನಿಪಿ.3 ರ ಮೊದಲ ಪುಟದ ಹಿಂಭಾಗದಲ್ಲಿ ಏನನ್ನೋ ಬರೆದು ಅಳಿಸಿದಂತೆ ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿ ಅವರೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರದ ಒಂದನೇ ಪುಟದ ಹಿಂಭಾಗದಲ್ಲಿ ದಿನಾಂಕ 19-07-1997 ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ಸ್ಟಾಂಪ್ ಪೇಪರನ್ನು ದಾವಣಗೆರೆಯಲ್ಲಿ ಖರೀದಿ ಮಾಡಿದ ಬಗ್ಗೆ ಸೀಲು ಇರುತ್ತದೆ ಎಂದರೆ ಸಾಕ್ಷಿ, ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲಿ ನಿಪಿ.3 ರ ದಾಖಲೆಯಲ್ಲಿ ನಮೂದಿಸಿರುವ ಎಲ್ಲಾ ವಿಚಾರಗಳನ್ನು ನನಗೆ ಬೇರೆಯವರು ಓದಿ ಹೇಳಿರುತ್ತಾರೆ ಎಂದರೆ ಸರಿ. ನಿಪಿ.3 ನ್ನು ರಾಮ ದೇವಾಡಿಗರವರು ತಯಾರು ಮಾಡಿ ನಮಗೆ ತಂದು ಕೊಟ್ಟಿರುತ್ತಾರೆ, ನಾನು ಅವರಿಗೆ ಹಣವನ್ನು ತಂದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.3 ನ್ನು ಎಲ್ಲಿ, ಯಾರು ಮತ್ತು ಯಾವಾಗ ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

6. ನನಗೆ ನಿಪಿ.3 ನ್ನು ಯಾವ ದಿನಾಂಕ ಕೊಟ್ಟಿರುತ್ತಾರೆ ಎಂದು ನೆನಪಿಲ್ಲ, ಖರೀದಿ ಮಾಡುವ ಪೂರ್ವದಲ್ಲಿ ಸದರಿ ದಾಖಲೆಯನ್ನು ತಂದು ಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ನನಗೆ ಕೊಡುವಾಗ ವಿಠಲ್ ಪೈ, ಗಣಪು ದೇವಾಡಿಗ ಹಾಗೂ ಅವರ ಹೆಂಡತಿ ಸಹಿ ಮಾಡಿ ನನಗೆ ಕೊಟ್ಟಿರುತ್ತಾರೆ. ನಾವೇ ಅವರಿಗೆ ಬರುವುದಕ್ಕೆ ಹೇಳಿರುತ್ತೇವೆ. ರಾಮ ದೇವಾಡಿಗರವರ ಮನೆ ಹತ್ತಿರ ಗಣಪು ದೆವಾೀಡಿಗ, ವಿಠಲ ಪೈ, ವಿಜಯ ಪೈ ಅವರುಗಳನ್ನು ನಾನು ಕರೆದುಕೊಂಡು ಹೋಗಿರುತ್ತೇನೆ.

7. ನಿಪಿ.3 ರಲ್ಲಿ ವಿಠಲ ಪೈ, ಅವರ ಹೆಂಡತಿ, ನಾನು ಹಾಗೂ ರಾಮ ದೇವಾಡಿಗರವರು ಸಹಿ ಮಾಡಿರುತ್ತಾರೆ. ಗಣಪ ದೇವಾಡಿಗರವರು ನಿಪಿ.3 ಕ್ಕೆ ಸಹಿ ಮಾಡಿರುವುದಿಲ್ಲ. ನಿಪಿ.3 ಕ್ಕೆ ರಾಮ ದೇವಾಡಿಗರವರು ಮೊದಲು ಸಹಿ ಮಾಡಿರುತ್ತಾರೆ,. ಸಾಕ್ಷಿದಾರರಲ್ಲಿ ಮೊದಲು ವಿಠಲ

ಪೈ ರವರು ಸಹಿ ಮಾಡಿರುತ್ತಾರೆ. ವಿಠಲ ಪೈ ಹಾಗೂ ಅವರ ಹೆಂಡತಿ ಸಹಿ ಮಾಡಿದ ನಂತರ ನಾನು ಸಹಿ ಮಾಡಿರುತ್ತೇನೆ. ನಿಪಿ.3 ರ ಸ್ಟಾಂಪ್ ಪೇಪರ್ ಗೆ ವ್ಯಾಲ್ಯು ಇಲ್ಲ ಎಂದು ಯಾರಾದರೂ ಹೇಳಿದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕರಾರು ತಯಾರಿಸಿದ ಛಾಪಾ ಕಾಗದ 2008 ನೇ ಇಸವಿಯ ಹೊತ್ತಿಗೆ ತನ್ನ ಮೌಲ್ಯ ಕಳೆದುಕೊಂಡಿದ್ದು, ಕರ್ನಾಟಕ ಸರಕಾರ ಛಾಪಾ ಕಾಗದವನ್ನು ರದ್ದುಪಡಿಸಿ ಬೇರೆ ಛಾಪಾ ಕಾಗದವನ್ನು ಜಾರಿಗೆ ತಂದಿರುತ್ತದೆ ಎಂದರೆ ಸಾಕ್ಷಿ ರಾಮ ದೇವಾಡಿಗ ನನಗೆ ತಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

8.ಸದರಿ ನಿಪಿ.3 ರಲ್ಲಿ ರಾಮ ದೇವಾಡಿಗರಿಗೆ 68 ವರ್ಷ ಎಂದು ಬರೆದಿರುತ್ತದೆ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ, ಓದಿದವರು ಹೇಳಿದ್ದರಾ ಎಂದರೆ ನನಗೆ ನೆನಪಿಟ್ಟುಕೊಳ್ಳಲು ಆಗಲಿಲ್ಲ ಎಂದು ನುಡಿಯುತ್ತಾರೆ. ರಾಮ ದೇವಾಡಿಗರಿಗೆ 2008 ನೇ ಇಸವಿಯಲ್ಲಿ 64 ವರ್ಷ ಇದ್ದು, 68 ವರ್ಷ ಆಗಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ರಾಮ ದೇವಾಡಿಗರವರ ಯಾವ ಸರ್ವೆ ನಂಬ್ರದಲ್ಲಿ ಯಾವ ಹಿಸ್ಸೆಯಲ್ಲಿ ದಾರಿಯ ಹಕ್ಕು ಇರುತ್ತದೆ ಎಂದು ನಮೂದಿಸಲಾಗಿತ್ತಾ ಎಂದರೆ ಸಾಕ್ಷಿ ನಾನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.3 ರಂತೆ 1 ನೇ ಪಾರ್ಟಿ ಎಂದರೆ ರಾಮ ದೇವಾಡಿಗ, 2 ನೇ ಪಾರ್ಟಿ ಎಂದರೆ ಶೇಖರ ಪೂಜಾರಿ ಎಂದರೆ ಸರಿ. ಸದರಿ ನಿಪಿ.3 ರ ದಾಖಲೆಯಲ್ಲಿ 2 ನೇ ಪಾರ್ಟಿಯವರ ಯಾವ ಸರ್ವೆ ನಂಬ್ರ, ಯಾವ ಹಿಸ್ಸೆ ನಂಬ್ರ ಹಾಗೂ ಎಷ್ಟು ವಿಸ್ತೀರ್ಣದ ಆಸ್ತಿಗೆ ದಾರಿಯನ್ನು ಬಿಡಲಾಗಿರುತ್ತದೆ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ 30 ವರ್ಷಗಳಿಂದ ಓಡಾಡುತ್ತಿರುತ್ತೇವೆ ಎಂದು ನುಡಿಯುತ್ತಾರೆ.

9. ರಾಮ ದೇವಾಡಿಗರಿಗೆ ಅವರ ಕುಟುಂಬದಲ್ಲಿ ಆದ ವಿಭಾಗದಂತೆ ಸರ್ವೆ ನಂಬ್ರ 68 ರಲ್ಲಿ 9 ಜಾಗಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ.3 ರ ದಾಖಲೆಯಂತೆ 2 ನೇ ಪಾರ್ಟಿ ನಾನು ಎಂದರೆ ಸರಿ. ನಿಪಿ.3 ರಲ್ಲಿ 2 ನೇ ಪಾರ್ಟಿಯ ಆಸ್ತಿಗೆ ಹೋಗಿ ಬರಲು ರಸ್ತೆ ಇದೆ ಎಂದು ನಮೂದಿಸಲಾಗಿದ್ದು, ನನ್ನ ಹೆಂಡತಿಯ ಆಸ್ತಿಗೆ ಹೋಗಿ ಬರಲು ರಸ್ತೆ ಇರುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿಪಿ.3 ರಲ್ಲಿ ನನ್ನ ಹೆಂಡತಿಯ ಸಹಿ ಇರುವುದಿಲ್ಲ ಹಾಗೂ ಆಕೆ ಸದರಿ ಕರಾರು ಪತ್ರದಲ್ಲಿ ಪಕ್ಷಗಾರರಿರುವುದಿಲ್ಲ.

10. ನಿಪಿ.3 ರಲ್ಲಿ 2 ನೇ ಪಾರ್ಟಿಯವರ ಸ್ವತ್ತಿಗೆ ಎಂದು ನಮೂದಿಸಿದ್ದು, ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹಾಗೂ ಯಾವ ಭಾಗದಲ್ಲಿ ರಸ್ತೆ ಸಂಪರ್ಕ ಹೊಂದುತ್ತದೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಬರೆದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.3 ರಂತೆ ರೂ.5,000/- ವ್ಯವಹಾರ ಆಗಿದಂತೆ ಇರುತ್ತದೆ ಎಂದರೆ ಸರಿ. ಐದು ಸಾವಿರ ರೂಪಾಯಿಯನ್ನು ನನ್ನ ಹೆಂಡತಿ ಕೊಟ್ಟಂತೆ ಇರುವುದಿಲ್ಲ ಎಂದರೆ ಸರಿ. ವ್ಯವಹಾರ ಆದಾಗಿನಿಂದ ಇಲ್ಲಿಯವರೆಗೂ ಐದು ಸಾವಿರ ರೂಪಾಯಿಗೆ ಸಂಬಂದಿಸಿದಂತೆ ಸ್ಟಾಂಪ್ ಪೇಪರ್ ತೆಗೆದಿರುವುದಿಲ್ಲ ಎಂದು ಯಾರೂ ನನಗೆ ಹೇಳಿರುವುದಿಲ್ಲ. ದಾರಿಗೆ ಸಂದಂಬಪಟ್ಟಂತೆ ಕರಾರು ಮಾಡುವಾಗ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತದೆ ಹಾಗೂ ಅದರ ಅಗಲದ ಬಗ್ಗೆ ನಕ್ಷೆ ಮಾಡುತ್ತಾರೆ ಎಂದರೆ ಸರಿ. ನಿಪಿ.3 ನ್ನು ತಯಾರಿಸುವಾಗ ಆ ರೀತಿ ನಕ್ಷೆಯನ್ನು ತಯಾರಿಸಿರುತ್ತೇವೆ. ಆ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

11. ಸದರಿ ನಿಪಿ.3 ರಲ್ಲಿ ರಾಮ ಭಜನಾ ಮಂದಿರಕ್ಕೆ ಹೋಗಿ ಬುರವ ಸಾರ್ವಜನಿಕರಿಗೂ ಸಹ ಹಕ್ಕು ಇರುತ್ತದೆ ಎಂದು ಬರೆಯಲಾಗಿದೆ ಎಂದರೆ ಸರಿ. ಆದರೆ ಸದರಿ ರಾಮ ಭಜನ ಮಂದಿರದ ಸದಸ್ಯರುಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ರಾಮ ದೇವಾಡಿಗರ ಸ್ಥಳ ನಮ್ಮ ಸ್ವತ್ತಿನಿಂದ ಎಷ್ಟು ದೂರದಲ್ಲಿ ಬರುತ್ತದೆ ಹಾಗೂ ಯಾವ ದಿಕ್ಕಿನಲ್ಲಿ ಬರುತ್ತದೆ ಎಂಬುದನ್ನು ನಿಪಿ.3 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ರಾಮ ಮಂದಿರಕ್ಕೆ ಹೋಗುವ ರಸ್ತೆ ಯಾರ ಯಾರ ಹಕ್ಕಿನಲ್ಲಿ ಇರುತ್ತದೆ ಎಂದೂ ಸಹ ಬರೆದಿರುವುದಿಲ್ಲ ಎಂದರೆ ಸರಿ. ನಿಪಿ.3 ರ ಛಾಪಾ ಪತ್ರಗಳನ್ನು ಯಾರೋ ದಾವಣಗೆರೆಯವರು ಖರೀದಿಸಿದ್ದು. ಅವರ ಹೆಸರನ್ನು ಮುಖ ಪುಟದ ಹಿಂಭಾಗದಲ್ಲಿ ಇದ್ದುದನ್ನು ಅಳಿಸಿ, ನಾನು ಒಂದು ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.3 ರಲ್ಲಿರುವ ಸಹಿ ರಾಮ ದೇವಾಡಿಗರದ್ದಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆ ರಾಮ ದೇವಾಡಿಗರು ಯಾವುದೇ ಕರಾರನ್ನು ಬರೆದುಕೊಟ್ಟಿರುವುದಿಲ್ಲ ಹಾಗೂ ನಿಪಿ.3 ನ್ನು ಸಹ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ತಾನು ವಾಯ್ದೆ ಮುಗಿದ ಒಂದು ಛಾಪಾ ಕಾಗದದಲ್ಲಿ ರಾಮ ದೇವಾಡಿಗರ ಸಹಿಯನ್ನು ನಕಲಿಸಿ ಒಂದು ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಹಿಯನ್ನು ನಕಲಿಸಿ ಕರಾರು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಇರುತ್ತಾರೆ ಅವರೇ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.3 ನ್ನು ಸೃಷ್ಟಿಸಿರುವುದಕ್ಕೆ ತೆಕ್ಕಟ್ಟೆ ಗ್ರಾಮದವರು ಯಾರೂ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮೂರು ಜನ ಸಾಕು ಎಂದು ಹೇಳಿದ್ದಕ್ಕೆ ಮೂರು ಜನರು ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

12. ರಾಮ ದೇವಾಡಿಗರು ನನ್ನ ಪತ್ನಿಯ ಆಸ್ತಿಯಲ್ಲಿ ಸ್ಥಳ ಮಾಡಿಕೊಡುವುದಿದ್ದರೆ ಕಾನೂನಾತ್ಮಕವಾದ ಛಾಪಾ ಕಾಗದವನ್ನು ತಯಾರಿಸಿ ನಕ್ಷೆ ತಯಾರು ಮಾಡಿ ಕಾಗದ ಪತ್ರವನ್ನು ಬರೆದುಕೊಡುತ್ತಿದ್ದರು ಎಂದರೆ ಸಾಕ್ಷಿ ಅವರೇ ದಾಖಲೆ ಮಾಡಿಕೊಂಡು ಬಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.3 ನ್ನು ನಾನು ಸೃಷ್ಟಿಸಿದ್ದಲ್ಲದೇ ಆಗಿದ್ದರೆ ರಾಮ ದೇವಾಡಿಗರಿಂದ ಕಾನೂನಾತ್ಮಕವಾದ ಕರಾರನ್ನು ಮಾಡಿಕೊಳ್ಳುತ್ತಿದ್ದೆ ಎಂದರೆ ಸಾಕ್ಷಿ, ಕರಾರು ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮೂರು ಬಾರಿ ನಿಪಿ.3 ಕಾನೂನಾತ್ಮಕವಾಗಿ ಇದ್ದಿದ್ದರೆ ತಮ್ಮ ಹೆಂಡತಿಯ ಹೆಸರಿಗೆ ಕರಾರು ಮಾಡಿಸಿಕೊಳ್ಳುತ್ತಿದ್ದಿರಿ, ಅದು ಕಾನೂನಾತ್ಮಕವಾಗಿ ಇಲ್ಲದೇ ಇದ್ದುದರಿಂದ ನಾನು ಕರಾರು ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಅದು ಸರಿ ಇರುತ್ತದೆ ಎಂದು ನುಡಿಯುತ್ತಾರೆ.

13. ನಾನು ಖರೀದಿಸಿದಂತಹ ರಸ್ತೆ ಸಾರ್ವಜನಿಕ ರಸ್ತೆ ಎಂದು ಬಿಂಬಿಸುವ ಸಲುವಾಗಿ ರಾಮ ಭಜನಾ ಮಂದಿರಕ್ಕೆ ಹೋಗುವವರಿಗೂ ಸಹ ರಸ್ತೆ ಇರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ನಾನು ಹೇಳಿದಂತೆ ದಾರಿ ಹಕ್ಕು ಯಾರಿಗೂ ಬಂದಿರುವುದಿಲ್ಲ ಎಂದರೆ ಸಾಕ್ಷಿ ನಮಗೆ ಮಾತ್ರ ಬಂದಿರುತ್ತದೆ ಎಂದು ನುಡಿಯುತ್ತಾರೆ. ರಾಮ ದೇವಾಡಿಗರ ಸ್ಥಳದ ಆಸ್ತಿಯ ಮೇಲೆ ಯಾವುದೇ ದಾರಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ